272 (906) : ಶ್ರೀ ಕುಮಾರಸ್ವಾಮಿ ಹೆಚ್.ಕೆ. (ರಾಮನಗರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣದಲ್ಲಿ ಬಸ್ ಡಿಪೋ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದು ವಿಶ್ವವಿಖ್ಯಾತ ಸ್ಥಳವಾಗಿದ್ದು ಮಂಗಳೂರು ಧರ್ಮಸ್ಥಳದಂತಹ ಸ್ಥಳಗಳಿವೆ ಈ ಮಾರ್ಗದಲ್ಲಿ ಹೆಚ್ಚು ಬಸ್ಸುಗಳು ಸಂಚರಿಸುತ್ತಿರುವುದನ್ನು ಗಮನಿಸಲಾಗಿದೆಯೇ

ಇ) ಹಾಗಿದ್ದಲ್ಲಿ ತಕ್ಷಣ ಬಸ್ ಡಿಪೋ ಮಂಜೂರು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಹೌದು.

ಇ) ಇಲ್ಲ.

273 (690) : ಶ್ರೀ ಕುಮಾರಸ್ವಾಮಿ ಹೆಚ್.ಡಿ. (ರಾಮನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿರುವ ಅರ್ಕಾವತಿ ಬಡಾವಣೆಯ ಅವಾರ್ಡ್ ಆಗದೆ ಉಳಿದಿರುವ ಜಮೀನಿನ ವಿಸ್ತೀರ್ಣ ಎಷ್ಟು (ಸರ್ವೆ ನಂಬರ್‌ವಾರು ವಿವರ ನೀಡುವುದು);

ಆ) ಸದರಿ ಬಡಾವಣೆಯಲ್ಲಿ ಸ್ವಾಧೀನಪಡಿಸಿರುವ ಸರ್ಕಾರಿ ಜಮೀನಿನ ವಿಸ್ತೀರ್ಣವೆಷ್ಟು (ಕೆರೆ, ಸ್ಮಶಾನ, ಗೋಮಾಳ, ಖರಾಬ್, ಗುಂಡುಕೋಪುಗಳ ಪ್ರತ್ಯೇಕವಾದ ವಿವರಗಳನ್ನು ಒದಗಿಸುವುದು);

ಇ) ಅವಾರ್ಡ್ ಆಗಿ ಇಂಜಿನೀಯರಿಂಗ್ ವಿಭಾಗಕ್ಕೆ ಹಸ್ತಾಂತರಗೊಂಡಿರುವ ಜಮೀನು ಎಷ್ಟು (ಸರ್ವೇ ನಂ.ವಾರು ವಿವರ ನೀಡುವುದು);

ಈ) ಸರ್ಕಾರದ ಮುಂದಿರುವ (ಅವಾರ್ಡ್‌ಗಾಗಿ) ಜಮೀನಿನ ವಿವರಗಳನ್ನು ಒದಗಿಸುವುದು;

ಉ) ಉದ್ದೇಶಿತ ಬಡಾವಣೆಯಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರ ಮನೆಗಳನ್ನು ಕೆಡವಲಾಗಿದೆಯೇ;

ಊ) ಕೆಡವಲಾಗಿದ್ದರೆ ವಿವರಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಅಧಿಸೂಚನೆ ಹೊರಡಿಸಿರುವ 2750 ಎಕರೆ ಜಮೀನಿನಲ್ಲಿ 487 ಎಕರೆ 11 ಗುಂಟೆ ಸರ್ಕಾರಿ ಜಮೀನಾಗಿರುತ್ತದೆ. ಮತ್ತು 2262 ಎಕರೆ 29 ಗುಂಟೆ ಖಾಸಗಿ ಜಮೀನಾಗಿರುತ್ತದೆ. ಖಾಸಗಿ ಜಮೀನಿನ ಪೈಕಿ 1569 ಎಕರೆ 21 ಗುಂಟೆ ಜಮೀನಿಗೆ ಐತೀರ್ಪು ರಚಿಸಿ ಅನುಮೋದಿಸಲಾಗಿದೆ. ಐತೀರ್ಪು ಅನುಮೊದಿಸಿರುವ ಜಮೀನಿನ ಪೈಕಿ 1224 ಎಕರೆ 06 ಗುಂಟೆ ಜಮೀನನ್ನು ಅಭಿಯಂತರ ವಿಭಾಗಕ್ಕೆ